**<u>ದಿನಾಂಕ 26.06.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲು ಃ ವಾದಿ ಪರ ವಕೀಲರಿಂದ ಃ</u>**

ನಿಶಾನೆ ಡಿ 9 ರ ಕಾಲಂ.4 ರಲ್ಲಿ ರೋಮನ್ III ರಲ್ಲಿ ನಮೂದಿಸಿರುವ 54.5 X 40 ಅಡಿ ಜಾಗ ನಿಶಾನೆ ಡಿ 4 ರಲ್ಲಿ ನಮೂದಿಸಿರುವ ಆಸ್ತಿಯ ಪಶ್ಚಿಮಕ್ಕೆ ಇದೆ ಎಂದರೆ ಹೌದು. (ಈ ಹಿಂದೆ ದಿನಾಂಕ 22.05.2023 ರಂದು ಇದೇ ಸಾಕ್ಷಿಯ ಸಾಕ್ಷ್ಯದಲ್ಲಿ ಈ ಮೇಲೆ ಹೇಳಿದ ವಿಚಾರ ತಪ್ಪಾಗಿ ಬೆರಳಚ್ಚು ಆಗಿದ್ದರಿಂದ ಅದೇ ಪ್ರಶ್ನೆಯನ್ನು ಪುನಃ ಕೇಳಿ ವಿವರಣೆಯನ್ನು ಪಡೆದುಕೊಳ್ಳಲಾಗಿದೆ). ನಿಶಾನೆ ಡಿ 4 ರ ಕ್ರಯ ಪತ್ರವನ್ನು ಮಾಡಿಕೊಳ್ಳುವ ಸಮಯದಲ್ಲಿ ನಾನು ಕ್ರಯಕ್ಕೆ ಕೊಟ್ಟವರ ಬಳಿಯಿಂದ ಖಾತಾ ಎಕ್ಸ್ ಟ್ರಾಕ್ಟ್ ಪಡೆದುಕೊಂಡಿರುತ್ತೇನೆ. ಯಾವುದೇ ಆಸ್ತಿಯನ್ನು ಖರೀದಿ ಮಾಡಿದಾಗ ಸದರಿ ಆಸ್ತಿಗೆ ಸಂಬಂಧಿಸಿದ ಮೂಲ ದಾಖಲಾತಿಯನ್ನು ಪಡೆದುಕೊಳ್ಳುವ ಹಕ್ಕು ಕ್ರಯದಾರರಿಗೆ ಇರುತ್ತದೆ ಎಂದರೆ ಹೌದು. ಬಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪಡೆದುಕೊಳ್ಳಲು ನನಗೆ ತೊಂದರೆ ಇರಲಿಲ್ಲ. ಆದರೆ ನನ್ನ ವಕೀಲರು ಹೇಳಿರಲಿಲ್ಲ. ಅದ್ದರಿಂದ ನಾನು ಪಡೆದುಕೊಂಡಿಲ್ಲ. ನಾನು ಸೃಷ್ಟಿ ಮಾಡಿಕೊಂಡಿರುವ ನಿಶಾನೆ ಡಿ 4 ರ ಕ್ರಯ ಪತ್ರದ ಆಧಾರದ ಮೇರೆಗೆ ನಿಶಾನೆ ಡಿ 10 ಆಗಿರುತ್ತದೆ ಎಂದರೆ ಸುಳ್ಳು. ನಿಶಾನೆ ಡಿ 10 ರಲ್ಲಿ ರಾಜಸ್ವ ನಿರೀಕ್ಷಕರ ವರದಿ ಹಾಗು ಕಂದಾಯ ಅಧಿಕಾರಿಗಳ ಶಿಫಾರಸ್ಸಿನಂತೆ ಎಂದು ನಮೂದು ಮಾಡಿದ್ದು , ರಾಜಸ್ವ ನಿರೀಕ್ಷಕರು ಯಾವಾಗ ದಾವಾ ಸ್ವತ್ತಿಗೆ ಭೇಟಿ ನೀಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವರು ನನಗೇನು ಹೇಳಿ ಬರುತ್ತಾರಾ ಎಂದು ನುಡಿದಿರುತ್ತಾರೆ ಮತ್ತು ಅವರು ಬಂದಂತಹ ದಿನ ನನಗೆ ಗೊತ್ತಿಲ್ಲ. ನಿಶಾನೆ ಡಿ 10 ರ ಪ್ರಕಾರ ನನ್ನ ಹೆಸರಿಗೆ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ವರ್ಗಾವಣೆ ಮಾಡಿಕೊಳ್ಳಲು ವಾದಿ ಲಿಖಿತ NOC ನೀಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಡಿ 15 ನಾನು ನೀಡಿದ ನಿಶಾನೆ ಡಿ 10 ರ ಆಧಾರದ ಮೇರೆಗೆ ಬೆಂಗಳೂರು ಎಲೆಕ್ಟ್ರಿಸಿಟಿ ಸಪ್ಲೈ ಕಂಪನಿ ಲಿಮಿಟೆಡ್ ರವರು ನೀಡಿರುತ್ತಾರೆ ಎಂದರೆ ಹೌದು. ನಿಶಾನೆ ಡಿ 4 ರಲ್ಲಿ ಹೇಳಿದಂತಹ ಸ್ವತ್ತಿಗೆ ನಗರಸಭೆಯಿಂದ ನೀರು ಸರಬರಾಜು ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಒಂದು ವೇಳೆ ಬಾಡಿಗೆದಾರರಿಗೆ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು

ಕೊಟ್ಟಿರುತ್ತಿದ್ದರೆ ನಾನು ನೀರಿನ ಬಿಲ್ಲುಗಳನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿ ಅವರಿಗೆ ನೀರಿನ ಅವಶ್ಯಕತೆ ಇಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿಗೆ ಯಾವುದೇ ಬೋರ್‌ವೆಲ್ ಸೌಲಭ್ಯ ಇಲ್ಲ ಎಂದರೆ ಹೌದು.

ನಿಶಾನೆ ಡಿ 10 ರ ಆಧಾರದ ಮೇರೆಗೆ ನಿಶಾನೆ ಡಿ 3 ರ ಇ-ಖಾತಾ ಮಾಡಿಸಿಕೊಂಡಿರುತ್ತೇನೆ ಎಂದರೆ ಹೌದು. ಅದೇ ರೀತಿ ನಿಶಾನೆ ಡಿ 12 ನ್ನು ನಿಶಾನೆ ಡಿ 10 ರ ಆಧಾರದ ಮೇರೆಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಹೌದು. ನಿಶಾನೆ ಡಿ 4 ರ ಕ್ರಯ ಪತ್ರಕ್ಕೆ ಕೆ.ಕೆ.ಕುಶ ಮತ್ತು ಗಣೇಶ್ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ನಿಶಾನೆ ಡಿ 4 ಕ್ರಯ ಪತ್ರದಲ್ಲಿ ಸಾಕ್ಷಿದಾರರಲ್ಲಿ ಕುಶ ರವರು ದಾವಾ ಸ್ವತ್ತಿನ ನಿಜವಾದ ಮಾಲೀಕರು ಯಾರು ಎಂದು ಹೇಳಲು ಸಮರ್ಥರಿದ್ದಾರೆ. ನನಗೆ ಕುಶ ರವರನ್ನು ನ್ಯಾಯಾಲಯದಲ್ಲಿ ಸಾಕ್ಷಿದಾರರಾಗಿ ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ ಪ್ಯಾರಾ 2 ರಲ್ಲಿ ಸಾವಿತ್ರಮ್ಮನವರಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಎಂದು ಹೇಳಿದ್ದು, ಆ ಬಗ್ಗೆ ಸದರಿಯವರಿಂದ ವಂಶವೃಕ್ಷ ಪಡೆದಿರುವುದಿಲ್ಲ. ನಾನು ಈ ರೀತಿ ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದಲ್ಲಿ ಯಾವುದೇ ದಾಖಲಾತಿಯ ಆಧಾರದ ಮೇಲೆ ಹೇಳಿಲ್ಲ, ಆದರೆ ಸಾವಿತ್ರಮ್ಮನವರ ಮೊಮ್ಮಗ ಜಯಸಿಂಹ ಹೇಳಿದ ಪ್ರಕಾರ ನಾನು ಬರೆಸಿರುತ್ತೇನೆ. ನನ್ನ ಮುಖ್ಯವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 3 ರಲ್ಲಿ ಉಮಾದೇವಿ ಆಲಿಯಾಸ್ ವೇದರಾವ್ ರವರು ಮೃತಪಟ್ಟಿದ್ದು ಅವರಿಗೆ ಶ್ವೇತಾ ಎನ್ನುವ ಮಗಳು, ಜಯಸಿಂಹ ಎನುನ್ನುವ ಮಗ ಇರುತ್ತಾರೆ ಎಂದು ಹೇಳಿರುತ್ತೇನೆ. ಆ ಬಗ್ಗೆ ನಾನು ಉಮಾದೇವಿಯವರ ವಂಶವೃಕ್ಷ ಪಡೆದಿಲ್ಲ. ಸಾವಿತ್ರಮ್ಮರವರ ಜೀವಿತ ಕಾಲದಲ್ಲಿ ಅವರ ಯೋಗಕ್ಷೇಮವನ್ನು ಅವರ ಮಗಳಾದ ಉಮಾದೇವಿ ಅಲಿಯಾಸ್ ವೇದರಾವ್ ರವರು ನೋಡಿಕೊಳ್ಳುತ್ತಿದ್ದರು ಎಂದು ನಾನು ಹೇಳಿರುವುದು ಸುಳ್ಳು, ಆದರೆ ಸಾವಿತ್ರಮ್ಮರವರನ್ನು ಅವರ ಗಂಡು ಮಕ್ಕಳಾದ ವಾದಿ 1(ಎ) ಮತ್ತು (ಬಿ) ರವರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮುಖ್ಯವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 4 ರಲ್ಲಿ ಬಿ ಷೆಡ್ಯೂಲ್ ಸ್ವತ್ತು ಉಮಾದೇವಿ ಅಲಿಯಾಸ್ ವೇದಾರಾವ್ ರವರಿಗೆ ಹೋಗಬೇಕು ಎಂದು ತೀರ್ಮಾನವಾಗಿರುತ್ತದೆ ಎಂದು ನಾನು ಹೇಳಿದ್ದು ಆ ವಿಚಾರವನ್ನು ಯಾವುದೇ ದಾಖಲಾತಿಗಳ ಆಧಾರದ ಮೇಲೆ ಹೇಳಿರುವುದಿಲ್ಲ, ಆದರೆ

ಸಾವಿತ್ರಮ್ಮ ರವರು ನನಗೆ ಹೇಳಿದ ಮಾಹಿತಿಯ ಪ್ರಕಾರ ಹೇಳಿರುತ್ತೇನೆ. ಅದೇ ಪ್ಯಾರಾದಲ್ಲಿ ಉಳಿಕ ಸ್ವತ್ತಾದ 2878 Sq.Ft. ನಂಜುಂಡರಾವ್ ಶ್ರೀನಾಥ ಮತ್ತು ಗಾಯಿತ್ರಿದೇವಿ ರವರಿಗೆ ಸೇರಿದ್ದು ಎಂದು ಹೇಳಿದ್ದು ಆ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ.

ಪ್ಯಾರಾ 5 ರಲ್ಲಿ ಸಾವಿತ್ರಮ್ಮ ರವರು ತಮ್ಮ ಮೊಮ್ಮಕ್ಕಳ ಮತ್ತು ಅಳಿಯ ರವರ care and custody ಯಲ್ಲಿ ಇದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ಪ್ಯಾರಾದಲ್ಲಿ ನಾನು ದಾವಾ ಸ್ವತ್ತು ಎರಡು ಖಾತಾ ನಂಬರ್‌ಗಳನ್ನು ಹೊಂದಿದ್ದು, 2217/1 ಮತ್ತು 2217/2 ಎನ್ನುವ ಎರಡು ಖಾತೆಗಳನ್ನು ಹೊಂದಿರುತ್ತೇನೆ ಎಂದು ನಾನು ಸುಳ್ಳು ಹೇಳಿರುತ್ತೇನೆ, ದಾವಾ ಸ್ವತ್ತು ಆ ರೀತಿ ಎರಡು ಖಾತೆಗಳನ್ನು ಹೊಂದಿಲ್ಲ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ನಿಶಾನೆ ಡಿ 7 ರ ದಾಖಲೆಯಲ್ಲಿ ಖಾತಾ ನಂ.4496 ಎಂದು ನಮೂದಾಗಿದೆ, ಡೋರ್ ನಂ.2217 ಎಂದು ನಮೂದಾಗಿದೆ, ನಾನು ಹೇಳಿದಂತೆ 2217/1 ಮತ್ತು 2217/2 ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ಸರಿ ಇದೆ. ಉಮಾದೇವಿ ಅಲಿಯಾಸ್ ವೇದರಾವ್ ರವರ ಮರಣ ನಂತರ ವಾದಿ ಸಾವಿತ್ರಮ್ಮ ರವರು ದಾವಾ ಬಿ ಷೆಡ್ಯೂಲ್ ಸ್ವತ್ತಿನ ದಾಖಲಾತಿಗಳನ್ನು ನಿಮ್ಮ ಹೆಸರಿಗೆ ಮಾಡಿಕೊಳ್ಳಿ ಎಂದು ಉಮಾದೇವಿಯವರ ಮಕ್ಕಳಿಗೆ ಒತ್ತಡ ತಂದಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಈ ವಿಚಾರವನ್ನು ಸಾವಿತ್ರಮ್ಮರವರ ಮೊಮ್ಮಗ ಜಯಸಿಂಹ ರವರು ನನಗೆ ಹೇಳಿರುತ್ತಾರೆ. ಅದೇ ಪ್ಯಾರಾದಲ್ಲಿ ಉಮಾದೇವಿಯವರ ಮಕ್ಕಳು ಬಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ನಿರ್ಧರಿಸಿದ್ದರು ಎಂದು ಹೇಳಿದ್ದು, ಆದರೆ ಉಮಾದೇವಿಯವರ ಮಕ್ಕಳಿಗೆ ಆ ರೀತಿ ಬಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅವರ ಹೆಸರಿಗೆ ಯಾವುದೇ ದಾಖಲಾತಿಗಳು ಇರಲಿಲ್ಲ ಎಂದರೆ ಹೌದು. ಉಮಾದೇವಿ ರವರ ಮಗ ಜಯಸಿಂಹ ನನ್ನ ಸಂಬಂಧಿಕನಲ್ಲ. ಇದೇ ದಾವಾ ಸ್ವತ್ತಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ಜಯಸಿಂಹ ರವರ ನಡುವೆ ಪರಿಚಯ ಆಗಿತ್ತು.

ಪ್ಯಾರಾ 7 ರಲ್ಲಿ ದಾವಾ ಬಿ ಷೆಡ್ಯೂಲ್ ಸ್ವತ್ತಿನ ಮಾರಾಟದ ಮಾತುಕತೆ ಆಗಿತ್ತು ಎಂದು ನಮೂದಿಸಿದ್ದು ಮಾರಾಟದ ಮಾತುಕತೆಯನ್ನು ನಾನು ಉಮಾದೇವಿಯವರ

ಮಕ್ಕಳು ಮತ್ತು ವಾದಿ ಸಾವಿತ್ರಮ್ಮ ಇಬ್ಬರ ನಡುವೆಯು ಮಾಡಿರುತ್ತೇನೆ. ಮಾರಾಟದ ಮಾತುಕತೆ ದಾವಾ ಬಿ ಷೆಡ್ಯೂಲ್ ಸೈಟ್‌ನ ಬಳಿ ಆಗಿತ್ತು. ನಾನು ಮುಂಗಡ ಹಣ ಕೊಡುವ ಸಮಯದಲ್ಲಿ ಯಾವುದೇ ಅಗ್ರಿಮೆಂಟ್ ಆಗಿರಲಿಲ್ಲ. ಮುಂಗಡ ಹಣ ಕೊಟ್ಟು ಒಂದು ವಾರದ ನಂತರ ನೇರವಾಗಿ ಕ್ರಯ ಪತ್ರವಾಗಿರುತ್ತದೆ. ಮುಂಗಡ ಹಣ ರೂ.10,000/- ಮತ್ತು ನೀಡಿರುತ್ತೇನೆ. ಸಾವಿತ್ರಮ್ಮರವರು ತಮ್ಮ ಗಂಡುಮಕ್ಕಳ ಯೋಗಕ್ಷೇಮದಲ್ಲಿ ಇದ್ದರು, ಆದ್ದರಿಂದ ಪ್ಯಾರಾ 7 ರಲ್ಲಿ ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರಿಗೆ ನಿಶಾನೆ ಡಿ 4 ರ ಕ್ರಯ ಪತ್ರದ ಸಮಯದಲ್ಲಿ ಬಲಗೈಗೆ ಏಟಾಗಿದ್ದ ಕಾರಣ ಸಹಿ ಹಾಕಲು ಸಾಧ್ಯವಾಗದೇ ಇದ್ದುದರಿಂದ, ಅವರ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳಲಾಗಿದೆ ಎನ್ನುವ ಬಗ್ಗೆ ಸಬ್‌ರಿಜಿಸ್ಟ್ರಾರ್ ರವರು ಸದರಿ ದಾಖಲೆಯಲ್ಲಿ ದೃಢೀಕರಿಸಿರುವುದಿಲ್ಲ. ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಇಬ್ಬರು ಬಾಡಿಗೆದಾರಿಗೆ ನೀಡಿರುತೇನೆ ಎನ್ನುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಅವು ಹಿಂದಿನ ದಾಖಲೆಗಳು, ಆದ್ದರಿಂದ ಹಾಜರುಪಡಿಸಿಲ್ಲ ಎಂದು ಹೇಳಿರುತ್ತಾರೆ. 2015 ರಿಂದ ಇಲ್ಲಿಯವರೆಗೆ ಒಬ್ಬರೇ ಬಾಡಿಗೆದಾರರಿಗೆ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಕೊಟ್ಟಿರುತ್ತೇನೆ.

ನನ್ನ ಮುಖ್ಯವಿಚಾರಣೆ ಪ್ಯಾರಾ 10 ರಲ್ಲಿ ಹೇಳಿರುವ ಒಪ್ಪಿಗೆ ಪತ್ರದಲ್ಲಿ ನನ್ನ ಸಹಿಯನ್ನು ಸೃಷ್ಟಿಸಿದ (Manupulate) ಬಗ್ಗೆ ನನಗೆ ಈ ದಾವಾ ಸಮನ್ಸ್ ಬಂದ ಮೇಲೆ ಗೊತ್ತಾಗಿದೆ. ಆ ರೀತಿ ನನ್ನ ಸಹಿಯನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಗೊತ್ತಾದ ನಂತರ ನಾನು ನನ್ನ ವಕೀಲರಿಗೆ ಹೇಳಿ ಕ್ರಮ ಜರುಗಿಸಿರುತ್ತೇನೆ. ಆದರೆ ಆ ಬಗೆ ನಾನು ಯಾವುದೇ ದೂರನ್ನು ಕೊಟ್ಟಿಲ್ಲ. ಸಾವಿತ್ರಮ್ಮ ರವರ ಗಂಡು ಮಕ್ಕಳು ಯಾವುದೇ ಬೆದರಿಕೆ ಹಾಕಿಲ್ಲ ಮತ್ತು ಯಾವುದೇ ಮೋಸ ಮಾಡಿಲ್ಲ, ಆದರೂ ನಾನು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಸಾವಿತ್ರಮ್ಮನ ಮಕ್ಕಳು ಸದರಿಯವರ ಜಿಪಿಎ ಪಡೆದು ನನಗೆ ಯಾವುದೇ ರೀತಿಯ cheating ಮಾಡಲು ಪ್ರಯತ್ನ ಪಟ್ಟಿಲ್ಲ, ಆದರೂ ನಾನು ಆ ಬಗ್ಗೆ ಪ್ಯಾರಾ 10 ರಲ್ಲಿ ಸುಳ್ಳು ವಿಚಾರಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರ ಗಂಡು ಮಕ್ಕಳು ನನಗೆ ಮೋಸ ಮಾಡಿಲ್ಲ, ಆದರೆ ನಾನು ಸಾವಿತ್ರಮ್ಮ ರವರ ಆಸ್ತಿಯನ್ನು ಕಬಳಿಸುವ ಉದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾವಿತ್ರಮ್ಮ ರವರಿಗೆ ದಾವಾ ಬಿ

ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಮತ್ತು ಯಾವುದೇ ಕ್ರಯ ಪತ್ರವನ್ನು ನನಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರು ಯಾವುದೇ ಕ್ರಯ ಪತ್ರವನ್ನು ನನಗೆ ಬರೆದುಕೊಡದೇ ಇರುವುದರಿಂದ ಅವರ ಜೀವಿತ ಕಾಲದಲ್ಲಿ ಅವರೇ ಸ್ವಾಧೀನದಲ್ಲಿದ್ದರು ಮತ್ತು ಅವರ ಮರಣಾ ನಂತರ ಅವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು. ನಿಶಾನೆ ಡಿ 4 ರ ಕ್ರಮ ಪತ್ರ ಸೃಷ್ಟಿ ಮಾಡಿರುವ ದಾಖಲೆ ಆಗಿರುವುದರಿಂದ ಸದರಿ ದಾಖಲೆಯ ಆಧಾರದ ಮೇಲೆ ಯಾವುದೇ ಹಕ್ಕು ಲಭ್ಯವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.